


ಎಡದಿಂದ ಬಲಕ್ಕೆ :

1. ಹಗೆ ಸಾಧಿಸುವುದೇಕೆ ? ಅದಿನ್ನೂ ಎಳೇ ಹಸುಳೆ (4)
3. ಮಗುವಿನ ಬಗೆಗೇ ಆಕೆಯದು ಸದಾ ದೃಷ್ಟಿ (3)
4. ಒಳ್ಳೆಯದೇ ಉದ್ದೇಶ. ಏಕೆಂದರೆ, ಅದು ಸ್ವಂತ ರಾಷ್ಟ್ರ (3)
6. ನಾಟ್ಯವನ್ನರಿಯದಿದ್ದರೂ ಅಭಿನಯ ಶ್ರೇಷ್ಠ ಆತ (4)
7. ನೂರಾರು ತರಹ ಸಲಹೆಗಳು. ಬಿಡುವೇ ಇಲ್ಲ (4)
8. ಹಕ್ಕನ್ನು ನಿರಾಕರಿಸುವುದು ಅಪಾಯ ತಂದೀತು (4)
10. ಕವಡೆ ಮಾರಿ ಹಣ ಗಳಿಸುವುದಕ್ಕೂ ಭಾರೀ ನಿಯಂತ್ರಣ (4)
12. ಸಪ್ಪೆಯಾದದ್ದನ್ನು ಸರಿಪಡಿಸಲು ಇದು ಒಳ್ಳೇ ತಂತ್ರ (4)
14. ವೀರನಾಗಿದ್ದಲ್ಲದೆ ಕೇಳಿದ್ದನ್ನೆಲ್ಲ ನೀಡುತ್ತಿದ್ದವ ಕರ್ಣ (4)
16. ಸುಮ್ಮ ಸುಮ್ಮನೇ ಏಕೆ ಇಂಥ ಸಂತಸ, ಹಿಗ್ಗು ? (3)
17. ಮುರುಳಿಯ ನಾದ ಕಿವಿಗೆ ಬಿದ್ದರೆ ಸಾಕು, ಹುಚ್ಚನೇ ಆಗುತ್ತಾನೆ (3)
18. ದೇವನನ್ನು ಸಾಕ್ಷಾತ್ಕರಿಸಿದ ಅರಣ್ಯ ಪ್ರದೇಶ (4)

ಮೇಲಿಂದ ಕೆಳಕ್ಕೆ :

1. ಹೊನ್ನಿನಾಸೆಗೆ ನಡೆದದ್ದು ಆ ಕಗ್ಗೊಲೆ (3)
2. ಅಸುರರನ್ನೂ ಆಕರ್ಷಿಸುವಂತಹ ಇಂಪಾದ ಧ್ವನಿ (3)
3. ಆ ತೋಟಗಾರನ ನಿರ್ಧಾರದಲ್ಲಿ ಎಂಥ ದೃಢತೆ ನೋಡಿ (4)
5. ಕೋಶವನ್ನಿಡೀ ಖಾಲಿ ಮಾಡಿಸಿದ ಮೋಸಗಾರ (3)
7. ನಾಯಕನ ಅಭಿಪ್ರಾಯವೇ ಅಂತಿಮ ತೀರ್ಮಾನಕ್ಕೆ ಆಕರ (4)
9. ತಾಪತ್ರಯದ ಬಿಸಿ ತೆಗೆದು ಅಮೂಲ್ಯ ಮಣಿ ಮೂರು (4)
11. ವಂಚನೆ ತಪ್ಪಿಸುವ ಸೂಚನೆಗಳನ್ನು ತಪ್ಪದೇ ಪಠಿಸು (3)
13. ಧಾರಾಳಿಯಂತೆ ನಟಿಸುವ ಆತ ನಿಜವಾಗಿ ನೀಚ ಮನುಷ್ಯ (3)
14. ಧನವಿಲ್ಲದಾದೊಡನೆ ಅವನಾಗುತ್ತಾನೆ ರಾಕ್ಷಸ (3)
15. ಮೇಣದ ಕಾರ್ಯ ಮಾಡುವವನೇ ಆಕೆಯ ಗಂಡ (3)

## 23-11-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ವರ್ಧನ ; 3. ಅಪರ್ಣ ; 4. ಜಠರ ; 6. ಆವರಣ ; 7. ಜೊತೆಗಾರ ; 9. ಹರತಾಳ ; 11. ಜಬರಿಸು ; 15. ನಲಿವು ; 16. ಲಡಾಯಿ ; 17. ಗೆಲುವು

ಮೇಲಿಂದ ಕೆಳಕ್ಕೆ :

1. ವರ್ಣನೆ ; 2. ನಜರು ; 3. ಅಧೀರ ; 5. ರಮ್ಯತೆ ; 6. ಆರೋಹ ; 8. ರಚಿಸು ; 10. ತಾಡನ ; 12. ಬಡಾಯಿ ; 13. ಹಾವುಗೆ ; 14. ಒಲವು

---

## ಪ್ರಶ್ನಾಂಕಣ

# ಶಾರ್ಕ್ ಹಲ್ಲಿನ ವಿಶೇಷ ಏನು?

ಶಾರ್ಕ್ ಗಳು ಮೃದ್ವಸ್ಥಿ ಮೀನುಗಳು. ಹಾಗಾಗಿ ಶಾರ್ಕ್ ಗಳಿಗೆ ಗಟ್ಟಿ ಎಲುಬುಗಳ 'ಅಸ್ಥಿ ಪಂಜರ' ಇಲ್ಲ. ಆದರೆ ಶಾರ್ಕ್ ಗಳ ಹಲ್ಲುಗಳು, ದಂತ ಪಂಕ್ತಿಗಳು ಮಾತ್ರ ದೃಢ ಮೂಳೆಗಳಿಂದಾಗಿವೆ. ಆದ್ದರಿಂದಲೇ ಮೃತ ಶಾರ್ಕ್ ಗಳ ಹಲ್ಲುಗಳು ಮಾತ್ರ ಕೊಳೆಯದೆ ಉಳಿಯುತ್ತವೆ ; ಪಳೆಯುಳಿಕೆಗಳಾಗುತ್ತವೆ. ಅದೇ ಶಾರ್ಕ್ ಹಲ್ಲುಗಳ ಮೊದಲ ವಿಶೇಷ.

ಎರಡನೆಯದಾಗಿ, ಶಾರ್ಕ್ ಹಲ್ಲುಗಳಿಗೆ 'ಬೇರು'ಗಳಿಲ್ಲ; ಬಲಿಷ್ಠ ಸ್ನಾಯುಗಳ ದವಡೆಗಳಲ್ಲಿ ಅವು ಕಚ್ಚಿ ನಿಂತಿವೆ, ಅಷ್ಟೆ. ಹಾಗಾಗಿ ಅವುಗಳ ಹಲ್ಲುಗಳು ಸ್ಥಿರವಲ್ಲ ; ಶಾರ್ಕ್ ಹಲ್ಲುಗಳು ಜೀವನದುದ್ದಕ್ಕೂ ಉಳಿಯುವುದಿಲ್ಲ. ಬೇಟೆಯಾಡುವಾಗಲೆಲ್ಲ, ಬಲಿ ಪ್ರಾಣಿಗಳನ್ನು ಬಲವಾಗಿ ಕಚ್ಚಿದಾಗಲೆಲ್ಲ ಕೆಲ ಕೆಲ ಹಲ್ಲುಗಳು ಅಥವಾ ಇಡೀ ಒಂದು ದಂತ ಪಂಕ್ತಿಯೇ ಉದುರಿಹೋಗುತ್ತವೆ ! ಆದರೇನು ? ಒಂದೆರಡು ದಿನಗಳಲ್ಲೇ ಉದುರಿ ಬಿದ್ದ ಹಲ್ಲುಗಳ ಸ್ಥಳಗಳಿಗೆ ಹೊಸ ಹಲ್ಲುಗಳು ಬರುತ್ತವೆ !

ಅದಕ್ಕೆಂದೇ ಶಾರ್ಕ್ ಗಳ ದವಡೆಗಳಲ್ಲಿ ಬೆಳವಣಿಗೆಯ ವಿವಿಧ ಹಂತಗಳಲ್ಲಿರುವ ಹಲವಾರು ದಂತ ಪಂಕ್ತಿಗಳು ಕನಿಷ್ಠ ಐದರಿಂದ ಗರಿಷ್ಠ ಐವತ್ತರವರೆಗೆ ಒಂದರ ಹಿಂದೊಂದು ಅಣಿಗೊಂಡಿರುತ್ತವೆ. ಉದುರಿದ ಹಲ್ಲುಗಳನ್ನು ಅಥವಾ ಇಡೀ ಹಲ್ಲು ಸಾಲುಗಳನ್ನು ಈ ಕಾದಿರಿಸಿದ ಹಲ್ಲುಗಳು ನವೀಕರಿಸುತ್ತವೆ. ಹೀಗೆ ಶಾರ್ಕ್ ಗಳ ಜೀವಿತಾವಧಿಯಲ್ಲಿ ಅವುಗಳ ದವಡೆಗಳಲ್ಲಿ ಹುಟ್ಟುವ-ಉದುರುವ ಹಲ್ಲುಗಳ ಸಂಖ್ಯೆ ಐವತ್ತು ಸಾವಿರದವರೆಗೂ ತಲುಪುತ್ತದೆ!

ಇನ್ನೂ ಒಂದು ವಿಶೇಷ ಏನೆಂದರೆ, ನೂರಾರು ಪ್ರಭೇದಗಳಿರುವ ಎಲ್ಲ ಶಾರ್ಕ್ ಗಳ ಹಲ್ಲುಗಳದೂ ಏಕರೂಪ ಅಲ್ಲ. ಬೇಟೆಯ ಕ್ರಮ ಮತ್ತು ಆಹಾರ ಪ್ರಾಣಿಗಳನ್ನಾಧರಿಸಿ ಶಾರ್ಕ್ ಹಲ್ಲುಗಳು ಉದ್ದ, ಆಕಾರ, ಗಾತ್ರ, ಸಂಖ್ಯೆ ಇತ್ಯಾದಿ ಎಲ್ಲ ಲಕ್ಷಣಗಳಲ್ಲೂ ಭಿನ್ನ ಭಿನ್ನವಾಗಿವೆ. ಶಾರ್ಕ್ ಹಲ್ಲುಗಳನ್ನು ಸ್ಥೂಲವಾಗಿ ನಾಲ್ಕು ವಿಧಗಳಲ್ಲಿ ವರ್ಗೀಕರಿಸಲಾಗಿದೆ.'ನರ್ಸ್ ಶಾರ್ಕ್' ಗಳಲ್ಲಿರುವಂತೆ ಚಿಪ್ಪಿನ ಜೀವಿಗಳನ್ನು ಬೇಟೆಯಾಡಲು ತಕ್ಕ ಚಪ್ಪಟೆಯಾದ, ಸಾಂದ್ರ ಹಲ್ಲುಗಳು, ಮಧ್ಯಮ ಗಾತ್ರದ ಮೀನುಗಳನ್ನು ಕಚ್ಚಿ ಹಿಡಿಯಲು ಸೂಕ್ತವಾಗುವಂತೆ ದಪ್ಪ ಸೂಜಿಗಳಂಥ ಮೊನಚಾದ ಹಲ್ಲುಗಳು ( ಚಿತ್ರ 1), ದೊಡ್ಡ ಗಾತ್ರದ ಪ್ರಾಣಿಗಳನ್ನು ಹಿಡಿದು ಛಿದ್ರಗೊಳಿಸಲು 'ದಿ ಗ್ರೇಟ್ ವೈಟ್ ಶಾರ್ಕ್' ನಲ್ಲಿರುವಂತೆ ಮೇಲ್ದವಡೆಯಲ್ಲಿ ಗರಗಸದಂಚಿನ ತ್ರಿಭುಜಾಕಾರದ ಮತ್ತು ಕೆಳ ದವಡೆಯಲ್ಲಿ ಚೂಪಾದ ಉದ್ದುದ್ದನಾದ ಹಲ್ಲುಗಳು ( ಚಿತ್ರ 2 ಮತ್ತು ಚಿತ್ರ 3 ಗಮನಿಸಿ ) ಮತ್ತು ಹಲ್ಲುಗಳ ಅಗತ್ಯವೇ ಇಲ್ಲದ, ನೇರವಾಗಿ ನುಂಗುವ ಆಹಾರಾಭ್ಯಾಸದ ' ವ್ಹೇಲ್ ಶಾರ್ಕ್' ಗಳಿಗಿರುವಂಥ ನಿಷ್ಕ್ರಿಯ ಹಲ್ಲುಗಳು. ಹೀಗೆ ಒಂದೇ ಪ್ರಾಣಿಯ ಬೇರೆ ಬೇರೆ ಪ್ರಭೇದಗಳಲ್ಲಿ ಬೇರೆ ಬೇರೆ ವಿನ್ಯಾಸಗಳಲ್ಲಿರುವುದೂ ಕೂಡ ಶಾರ್ಕ್ ಹಲ್ಲುಗಳದೇ ಮತ್ತೂ ಒಂದು ವಿಸ್ಮಯ, ವಿಶೇಷ.




■ ಎನ್. ವಾಸುದೇವ್